ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ ಸಭೆ/ 72 /2023-24 ದಿನಾಂಕ:29.06.2023.

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು-560001

ಮಾನ್ಯರೆ,

ವಿಷಯ: ದಿನಾಂಕ: 20.06.2023 ರಂದು ಆನ್‌ಲೈನ್ ಪರಿಚಲನೆ ಮುಖಾಂತರ ಅನುಮೋದನೆ ಕೋರಿ ಕಳುಹಿಸಿದ ಸಿಂಡಿಕೇಟ್ ಪರಿಚಲನೆಯ ನಡವಳಿಗಳು.

****

ದಿನಾಂಕ 20.06.2023 ರಂದು ಆನ್ ಲೈನ್ ಪರಿಚಲನೆಯ ಮುಖಾಂತರ ಅನುಮೋದನೆ ಕೋರಿ ಕಳುಹಿಸಲಾಗಿದ್ದ, ಸ್ವಾಯತ್ತ ಮಹಾವಿದ್ಯಾಲಯಗಳ ವಾರ್ಷಿಕ ಪರಿಶೀಲನೆ ಮೌಲ್ಯಾಂಕನ ಹಾಗೂ ಮಹಾವಿದ್ಯಾಲಯಗಳು ಕೋರಿರುವ ಹೊಸ ಕೋರ್ಸು, ಹೆಚ್ಚುವರಿ ಪ್ರವೇಶ ಸಂಖ್ಯೆ ಕುರಿತು ಪರಿಶೀಲಿಸಲು 8 ತಜ್ಞರ ಸಮಿತಿಗಳನ್ನು ರಚಿಸುವ ಕಾರ್ಯಸೂಚಿಗೆ ಮಾನ್ಯ ಸಿಂಡಿಕೇಟ್ ಸದಸ್ಯರು ನೀಡಿದ ಬಹುಮತದ ಒಪ್ಪಿಗೆಯನ್ನು ಪರಿಗಣಿಸಿ ಮಾನ್ಯ ಕುಲಪತಿಗಳು ಅನುಮೋದಿಸಿರುವ ನಡವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂಖ್ಯೆ: ಬಿಸಿಯು/ಸಿಂಡಿಕೇಟ್–ಆನ್‌ಲೈನ್ ಪರಿಚಲನೆಯ/72/2023–24 ದಿನಾಂಕ: 29.06.2023

**ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಆನ್–ಲೈನ್ ಪರಿಚಲನೆಯ ನಡವಳಿಗಳು.**

ವಿಷಯ: ಕರ್ನಾಟಕ ಸರ್ಕಾರದ ನಿರ್ದೇಶನ ಮೇರೆಗೆ ನ್ಯಾಷನಲ್ ಸ್ವಾಯತ್ತ ಮಹಾವಿದ್ಯಾಲಯದ ಪರಿಶೀಲನೆ (2) ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಅದೀನದಲ್ಲಿರುವ 06 ಸ್ವಾಯತ್ತ ಮಹಾವಿದ್ಯಾಲಯಗಳ 2020–21 ಮತ್ತು 2021–22 ನೇ ಶೈಕ್ಷಣಿಕ ಸಾಲಿನ ವಾರ್ಷಿಕ ಪರಿಶೀಲನೆ ಹಾಗೂ ಮೌಲ್ಯಾಂಕನ (3) ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಾವಿದ್ಯಾಲಯ ಕೋರಿರುವ ಹೊಸ ಕೋರ್ಸು, ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಕುರಿತು ತಜ್ಞರ ಸಮಿತಿ ರಚಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ : ಇಡಿ 544 ಯುಬಿವಿ 2022 ದಿನಾಂಕ : 17.02.2023
2. ಯುಜಿಸಿ ಪತ್ರ ಸಂಖ್ಯೆ: No.F. 22-1/2022(AC) Dated : 16.06.2022
3. ಈ ಕಛೇರಿ ಪತ್ರ ಸಂಖ್ಯೆ: BCU/Syn/Autonomous/24/2023-24 Dated: 29.05.2023
4. ಸ್ವಾಯತ್ತ ಮಹಾವಿದ್ಯಾಲಯಗಳ ಪರಿನಿಯಮ – 7.2

*****

**ಪರಮಾರ್ಶಕ ಟಿಪ್ಪಣಿ:**

ದಿ ನ್ಯಾಷನಲ್ ಮಹಾವಿದ್ಯಾಲಯಕ್ಕೆ UGC regulations (Conferment of Autonomous Status Upon Colleges and Measures for Maintenance of Standards in Autonomous Colleges) 2018 ನಿಯಮಗಳು 3.13 ಮತ್ತು 6.3 ರಡಿಯಲ್ಲಿ ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗದ ತೀರ್ಮಾನದ ಪ್ರಕಾರ 2017–18 ರಿಂದ 2021–22ರ ಅವಧಿಗೆ ಸ್ವಾಯತ್ತತೆ ಮುಂದುವರಿಕೆ ಘಟನೋತ್ತರ ಅನುಮೋದನೆ ಹಾಗೂ 2022–23 ರಿಂದ 2026–27ರ ವರೆಗಿನ ಐದು ವರ್ಷಗಳ ಸ್ವಾಯತ್ತತೆ ಮುಂದುವರೆಸಲು UGC ಅನುಮೋದನೆ ನೀಡಿ, ಅಧಿಸೂಚನೆ ಹೊರಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 64(13) ಅಡಿಯಲ್ಲಿ ಮುಂದುವರಿಕೆ ಅಧಿಸೂಚನೆ ಹೊರಡಿಸುವ ಪೂರ್ವದಲ್ಲಿ ಸರ್ಕಾರದ ಸಹಮತ ಕೋರಿ ಪತ್ರ ಬರೆಯಲು, ಸರ್ಕಾರ ಉಲ್ಲೇಖ(1)ರ ಪತ್ರದಲ್ಲಿ ಯುಜಿಸಿ ನಿಗದಿಪಡಿಸಿದ ಅರ್ಹತೆ/ಮಾನದಂಡಗಳನ್ನು ಮಹಾವಿದ್ಯಾಲಯ ಹೊಂದಿರುವ ಕುರಿತು ಪರಿಶೀಲಿಸಲು ಒಂದು ತಜ್ಞರ ಸಮಿತಿಯನ್ನು ರಚಿಸಲು ನಿರ್ದೇಶಿಸಿರುವ ಹಾಗೂ ಮಹಾವಿದ್ಯಾಲಯ BCA ವ್ಯಾಸಂಗಕ್ಕೆ ಹೆಚ್ಚುವರಿಯಾಗಿ ಪ್ರವೇಶ ಸಂಖ್ಯೆಯನ್ನು ಪರಿಗಣಿಸಲು ಒಂದು ತಜ್ಞರ ಸಮಿತಿ ರಚಿಸಿ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.

ಸ್ವಾಯತ್ತ ಮಹಾವಿದ್ಯಾಲಯಗಳ ಪರಿನಿಯಮ ಸಂಖ್ಯೆ 7.1 ಮತ್ತು 7.2 ರ ಪ್ರಕಾರ 2020-21 ಮತ್ತು 2021-22ನೇ ಸಾಲಿನ ವಾರ್ಷಿಕ ಪರಿಶೀಲನೆ ಹಾಗೂ ಮೌಲ್ಯಾಂಕನಕ್ಕಾಗಿ ಅಗತ್ಯ ವಿವರಗಳನ್ನು ಸಲ್ಲಿಸುವಂತೆ ಮಾಹಾವಿದ್ಯಾಲಯಗಳಿಗೆ ತಿಳಿಸಲಾಗಿತ್ತು ಅದರಂತೆ ಕೆಳಕಂಡ ಮಹಾವಿದ್ಯಾಲಯಗಳು ಅಗತ್ಯ ವಿವರಗಳನ್ನು ಸಲ್ಲಿಸಿರುತ್ತಾರೆ.

| ಕ್ರ.ಸಂ | ಮಹಾವಿದ್ಯಾಲಯದ ಹೆಸರು | ವರ್ಷ |
|---|---|---|
| 1. | ಸೆಂಟ್ ಜೋಸೆಫ್ ವಾಣಿಜ್ಯ ಮಹಾವಿದ್ಯಾಲಯ | 2020-21 ಮತ್ತು 2021-22 |
| 2. | ಮೌಂಟ್ ಕಾರ್ಮಲ್ ಮಹಾವಿದ್ಯಾಲಯ | 2020-21 ಮತ್ತು 2021-22 |
| 3. | ಜ್ಯೋತಿ ನಿವಾಸ್ ಮಹಾವಿದ್ಯಾಲಯ | 2020-21 ಮತ್ತು 2021-22 |
| 4. | ಪ್ರೆಸಿಡೆನ್ಸಿ ಮಹಾವಿದ್ಯಾಲಯ | 2021-22 |
| 5. | ಬಿ.ಎಂ.ಎಸ್ ಮಹಿಳಾ ಮಹಾವಿದ್ಯಾಲಯ | 2021-22 |
| 6 | ಆರ್.ವಿ.ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮಹಾವಿದ್ಯಾಲಯ | 2021-22 |

ಸ್ವಾಯತ್ತ ಮಹಾವಿದ್ಯಾಲಯಗಳ ಅಧಿನಿಯಮ ಸಂಖ್ಯೆ 7.1 ಮತ್ತು 7.2 ಈ ರೀತಿ ಇದೆ.

7.1 Each autonomous College/Institution shall constitute appropriate bodies to evaluate its academic performance, improvements in standards and to assess how best it has used the autonomous status. Such evaluation shall be done at the end of every academic year and the report of the evaluation shall be submitted to the University every year by 31st of July.

7.2 Syndicate by resolution may constitute a Review and Evaluation Committee to monitor the performance of the Autonomous College/Institution. Such Committee Shall consist of the Vice Chancellor or his nominee as the Chairman and such other members, who are experts in the field of education, as may be nominated by the syndicate. The Committee shall review the performance of the autonomous college. Institution every year and submit its reports to the Syndicate.

ಪರಿನಿಯಮಾವಳಿಗಳ ಪ್ರಕಾರ ಮಹಾವಿದ್ಯಾಲಯದವರು ವಾರ್ಷಿಕ ಪರಿಶೀಲನೆ ಹಾಗೂ ಮೌಲ್ಯಾಂಕನಕ್ಕಾಗಿ ಅಗತ್ಯ ವಿವರಗಳನ್ನು ಸಲ್ಲಿಸಿದ್ದು. ಮೇಲೆ ನಮೂದಿಸಿರುವ ಮಹಾವಿದ್ಯಾಲಯಗಳ ವಾರ್ಷಿಕ ಪರಿಶೀಲನೆ ಮೌಲ್ಯಾಂಕನ ಹಾಗೂ ಈ ಮಹಾವಿದ್ಯಾಲಯಗಳು ಕೋರಿರುವ ಹೊಸ ಕೋರ್ಸು ಹೆಚ್ಚುವರಿ ಪ್ರವೇಶ ಸಂಖ್ಯೆ ಕುರಿತು ಪರಿಶೀಲಿಸಲು ತಜ್ಞರ ಸಮಿತಿಗಳನ್ನು ರಚಿಸಬೇಕಾಗಿದೆ.

ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಸ್ವಾಯತ್ತ ಮಹಾವಿದ್ಯಾಯದಲ್ಲಿ ಕೆಳಂಡ ಹೊಸ ಕೋರ್ಸುಗಳನ್ನು ಪ್ರಾರಂಭಿಸಲು ಅನುಮತಿ ಕೋರಿ ಅರ್ಜಿಸಲ್ಲಿಸಿರುತ್ತಾರೆ.

| Sl.No | Course | Intake | Academic Year |
|---|---|---|---|
| 1 | English | 20 | 2022-23 |
| 2 | B.Com –Data Analytics | - | 2023-24 |
| 3 | B.Sc- Genetics | - | 2023-24 |
| 4 | B.Sc- Data Science | - | 2023-24 |
| 5 | BA- Visual Communication | - | 2023-24 |
| 6 | M.Sc- Zoology | - | 2023-24 |
| 7 | M.Sc- Organic Chemistry | - | 2023-24 |
| 8 | MA- Mass Communication & Journalism & Computer Science | - | 2023-24 |

ತಜ್ಞರ ಸಮಿತಿಯ ರಚನೆ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| 1. | ಕುಲಪತಿಗಳು | ಅಧ್ಯಕ್ಷರು |
| 2. | ಒಬ್ಬರು ಸಿಂಡಿಕೇಟ್ ಸದಸ್ಯರು | ಸದಸ್ಯರು |
| 3. | ಸಂಬಂಧಿಸಿದ ನಿಕಾಯಗಳ ಡೀನರು | ಸದಸ್ಯರು |
| 4. | ಹೊಸ ವಿಷಯಗಳ ಪ್ರವೇಶ ಸಂಖ್ಯೆ ಇದ್ದಲ್ಲಿ ಸಂಬಂಧಿಸಿದ ಅಧ್ಯಯನ ಮಂಡಳಿಗಳ ಅಧ್ಯಕ್ಷರು | ವಿಷಯ ತಜ್ಞರು |
| 5. | ಕುಲಸಚಿರು (ಮೌಲ್ಯಮಾಪನ) | ಸದಸ್ಯರು |
| 6. | ಕುಲಸಚಿರು (ಆಡಳಿತ) | ಸದಸ್ಯ ಕಾರ್ಯದರ್ಶಿ |

ಮೇಲೆ ತಿಳಿಸಿದಂತೆ (ಅ) 6 ಸ್ವಾಯತ್ತ ಮಹಾವಿದ್ಯಾಲಯಗಳ ವಾರ್ಷಿಕ ಪರಿಶೀಲನೆ ಹಾಗೂ ಮೌಲ್ಯಾಂಕನಕ್ಕಾಗಿ ಮತ್ತು ಸದರಿ ಮಹಾವಿದ್ಯಾಲಯಗಳು ಕೋರಿರುವ ಹೆಚ್ಚುವರಿ ಪ್ರವೇಶ ಸಂಖ್ಯೆ ಹಾಗೂ ಹೊಸ ಕೋರ್ಸು/ ವಿಷಯಗಳ ಪರಿಗಣನೆ (ಅ) ದಿ ನ್ಯಾಷನಲ್ ಸ್ವಾಯತ್ತ ಮಹಾವಿದ್ಯಾಲಯದಲ್ಲಿ ಸರ್ಕಾರದ ನಿರ್ದೇಶನದ ಪ್ರಕಾರ ಅಗತ್ಯವಾದ ಮೂಲ ಸೌಲಭ್ಯಗಳನ್ನು ಹೊಂದಿರುವ ಕುರಿತು ಹಾಗೂ BCA ಕೋರ್ಸಿಗೆ ಹೆಚ್ಚುವರಿ ಪ್ರವೇಶ ಸಂಖ್ಯೆಗಳನ್ನು ಪರಿಗಣಿಸಲು ಮತ್ತು (ಇ) ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಸ್ವಾಯತ್ತ ಮಹಾವಿದ್ಯಾಲಯದ ಮೂಲ ಸೌಕರ್ಯ, ಹೊಸ ಕೋರ್ಸು/ವಿಷಯ ಹಾಗೂ ಹೆಚ್ಚುವರಿ ಪ್ರವೇಶ ಸಂಖ್ಯೆಗಳನ್ನು ಪರಿಗಣಿಸಲು ತಜ್ಞರ ಸಮಿತಿ ರಚಿಸಲು ಅನುಮೋದನೆ ನೀಡಿ ಪ್ರತಿ ಸಮಿತಿಗೆ ನಾಮನಿರ್ದೇಶನ ಮಾಡಬೇಕಾದ ಸಿಂಡಿಕೇಟ್ ಸದಸ್ಯರ ಹೆಸರುಗಳನ್ನು ಆನ್ ಲೈನ್ ಪರಿಚಲನೆ ಮುಖಾಂತರ ಸಿಂಡಿಕೇಟ್ ಸಭೆಯು ಅನುಮೋದನೆ ಕೋರಿದೆ.

ಉಲ್ಲೇಖಿತ ಪತ್ರ (2) ರಲ್ಲಿ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಾವಿದ್ಯಾಯದಲ್ಲಿ, ಸ್ವಾಯತ್ತ ಅವಧಿ 2016–17 ರಿಂದ 2021–22ರವರೆಗೆ ಸ್ವಾಯತ್ತತೆ ಅವಧಿ ಮುಕ್ತಾಯವಾಗಿದ್ದು. ಸದರಿ ಮಹಾವಿದ್ಯಾಲಯದ ಸ್ವಾಯತ್ತ 2022–23 ರಿಂದ 2031–32 ರ ವರೆಗೆ ಮುಂದುವರೆಸಲು ಯು.ಜಿ.ಸಿಗೆ ಪತ್ರ ಬರೆಯಲಾಗಿದ್ದು. ಸ್ವಾಯತ್ತತೆ ಮುಂದುವರಿಕೆ ಕುರಿತಂತೆ ಇದುವರೆಗೆ ಯು.ಜಿ.ಸಿ ಯಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ. ಕಾರಣ ಈ ಮಹಾವಿದ್ಯಾಲಯದಲ್ಲಿ ಪ್ರಾರಂಭಿಸಲು ಉದ್ದೇಶವಿರುವ ಹೊಸ ವಿಷಯಗಳ ಕುರಿತು ಪರಿಶೀಲನಾ ವರದಿ ಸಲ್ಲಿಸಲು ಸಮಿತಿ ರಚಿಸಬೇಕಾಗಿ ಈ ಮಹಾವಿದ್ಯಾಲಯಗಳ ವಾರ್ಷಿಕ ಪರಿಶೀಲನೆ ಹಾಗೂ ಮೌಲ್ಯಾಂಕನಗಳ ಪರಿಶೀಲನೆ ಆಗಿದ್ದು. ಹೊಸ ಕೋರ್ಸು, ಪ್ರವೇಶ ಸಂಖ್ಯೆ ಹೆಚ್ಚಳ ಹಾಗೂ ಸರ್ಕಾರದ ಸೂಚನೆಯಂತೆ ಮಹಾವಿದ್ಯಾಲಯ ಅಗತ್ಯ ಮಾನದಂಡಗಳನ್ನು ಹೊಂದಿರುವ ಕುರಿತು ಪರಿಶೀಲಿಸಲು ಸಮಿತಿ ರಚಿಸಲು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆ.

ಪರಿನಿಯಮದ ಪ್ರಕಾರ ಸಿಂಡಿಕೇಟ್ ಸಭೆ ತಜ್ಞರ ಸಮಿತಿ ರಚಿಸಬೇಕಾಗಿರುವುದರಿಂದ ಪ್ರತಿ ಮಹಾವಿದ್ಯಾಲಯಕ್ಕೆ ಒಂದು ಸಮಿತಿಯಂತೆ 08 ಸಮಿತಿಗಳನ್ನು ರಚಿಸಬೇಕಾಗಿದೆ. ಸಿಂಡಿಕೇಟ್ ಸದಸ್ಯರನ್ನು ಹೊರತು ಪಡಿಸಿ ಉಳಿದ ಸದಸ್ಯರು ಪದನಿಮಿತ್ತ (Ex Officio) ಸದಸ್ಯರಾಗಿದ್ದು ಆಯಾ ಸ್ಥಾನಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು/ಪ್ರಾಧ್ಯಾಪಕರು ಸದಸ್ಯರಾಗಿರುತ್ತಾರೆ. ಕಾರಣ 08 ಸಮಿತಿಗಳಿಗೆ 8 ಜನ ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡಬೇಕಾದ ಪ್ರಸ್ತಾವನೆಯನ್ನು ಸಿಂಡಿಕೇಟ್ ಸದಸ್ಯರ ಆನ್ ಲೈನ್ ಪರಿಚಲನೆಯ ಮುಖಾಂತರ 3 ದಿವಸಗಳಲ್ಲಿ ಅನುಮೋದನೆ ನೀಡಲು ಕೋರಿ ಕಾರ್ಯಸೂಚಿಯನ್ನು ಕಳುಹಿಸಲಾಗಿದೆ. ಸದರಿ ಕಾರ್ಯಸೂಚಿಯಲ್ಲಿ ಮೂರು ದಿನಗಳ ಒಳಗಾಗಿ ತಮ್ಮ ಅಭಿಪ್ರಾಯವನ್ನು

registrar@bcu.ac.in ಇ–ಮೇಲ್‌ಗೆ ಕಳುಹಿಸಲು, 3 ದಿವಸಗಳಲ್ಲಿ ಯಾವುದೇ ವ್ಯತಿರಿಕ್ತ ಅಭಿಪ್ರಾಯ ಬರದಿದ್ದಲ್ಲಿ ಪ್ರಸ್ತಾವನೆಗೆ ಒಪ್ಪಿಗೆ ನೀಡಲಾಗಿದೆ ಎಂದು ಭಾವಿಸಲಾಗುವುದು ಎಂದು ತಿಳಿಸಲಾಗಿತ್ತು.

ದಿನಾಂಕ 23.06.2023 ಕ್ಕೆ 3 ದಿವಸಗಳ ಅವಧಿ ಪೂರ್ಣಗೊಂಡಿದ್ದು, 07 ಜನ ಸದಸ್ಯರು ಪ್ರಸ್ತಾವನೆಯ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶ್ರೀ ಸಮರ್ಥ ಮುನಿರಾಜುರವರು ಈ ಕುರಿತು ಭೌತಿಕ ಸಭೆ ಕರೆದು ಚರ್ಚಿಸಿ ತೀರ್ಮಾನಿಸಬೇಕೆಂದು ಅಭಿಪ್ರಾಯ ತಿಳಿಸಿದ್ದಾರೆ. ಶ್ರೀ ಎಂ.ವಿ ರಂಗಪ್ಪ ರವರು ಶ್ರೀ ಸಮರ್ಥ ಮುನಿರಾಜುರವರ ಅಭಿಪ್ರಾಯವನ್ನು ಬೆಂಬಲಿಸುವುದಾಗಿ ತಿಳಿಸಿದ್ದಾರೆ. 05 ಜನ ಸದಸ್ಯರು ಯಾವುದೇ ಅಭಿಪ್ರಾಯ ವ್ಯಕ್ತಪಡಿಸಲ್ಲವಾದ್ದರಿಂದ ಅವರು ಪ್ರಸ್ತಾವನೆಗೆ ಬೆಂಬಲ ನೀಡಿದ್ದಾರೆ ಎಂದು ಪರಿಭಾವಿಸಲಾಗುವುದು. ಹೀಗಾಗಿ ಬಹುಮತದ ಆಧಾರದ ಮೇಲೆ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆ ಅನುಮೋದನೆ ನೀಡಿದೆ ಎಂದು ಪರಿಗಣಿಸಿ ಕೆಳಗಿನ ನಿರ್ಣಯ ದಾಖಲಿಸಲಾಯಿತು.

## ಸಿಂಡಿಕೇಟ್ ಸಭೆ ನಿರ್ಣಯ

**ಇ–ಮೇಲ್ ಪರಿಚಲನೆ ಮುಖಾಂತರ ಅನುಮೋದನೆ ಕೋರಿ ಕಳುಹಿಸಲಾದ ಸ್ವಾಯತ್ತ ಮಹಾವಿದ್ಯಾಲಯಗಳ ವಾರ್ಷಿಕ ಪರಿಶೀಲನೆ ಮೌಲ್ಯಾಂಕನ ಹಾಗೂ ಕೆಲವು ಮಹಾವಿದ್ಯಾಲಯಗಳು ಕೋರಿರುವ ಹೊಸ ಕೋರ್ಸು, ಹೆಚ್ಚುವರಿ ಪ್ರವೇಶ ಸಂಖ್ಯೆ ಕುರಿತು ಪರಿಶೀಲಿಸಲು 8 ತಜ್ಞರ ಸಮಿತಿಗಳನ್ನು ರಚಿಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು. ಪ್ರತಿಯೊಂದು ತಜ್ಞರ ಸಮಿತಿಗೆ ಒಬ್ಬರು ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡಲು ಬಹುಮತದ ಅನುಮೋದನೆ ನೀಡಲಾಗಿದೆ ಎಂದು ನಿರ್ಣಯಿಸಲಾಯಿತು.**

ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಕುಲಪತಿಗಳು
ಸಭಾಧ್ಯಕ್ಷರು